ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ವಿಶೇಷಾಧಿಕಾರಿಗಳ ಕಛೇರಿ, ಕೇಂದ್ರೀಕೃತ ದಾಖಲಾತಿ ಘಟಕ, ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕೆ.ಜಿ.ರಸ್ತೆ, ಬೆಂಗಳೂರು-560002

ಸಂಖ್ಯೆ:ಸಿಎಸಿ-8/ಪ್ರೌ.ಶಿನೇ:ಮು.ಅ.ನೇ/2012-13 ದಿನಾಂಕ: 19-06-2012

ಶ್ರೀ:ಶ್ರೀಮತಿ ______________________

______________________

______________________

ಮಾನ್ಯರೆ,

ವಿಷಯ:- 2012-13 ನೇ ಸಾಲಿನಲ್ಲಿ ಪ್ರೌಢ ಶಾಲಾ ಶಿಕ್ಷಕರ ನೇಮಕಾತಿಯ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲು ಪರೀಕ್ಷಾ **ಕೇಂದ್ರಗಳಿಗೆ ಮುಖ್ಯ ಅಧೀಕ್ಷಕರನ್ನು** ನೇಮಿಸುವ ಬಗ್ಗೆ.

ಉಲ್ಲೇಖ:- ಉಪನಿರ್ದೇಶಕರು (ಆಡಳಿತ) ರವರು ಸಲ್ಲಿಸಿರುವ ಪಟ್ಟಿ ಹಾಗೂ ಶಿಫಾರಸ್ಸು ಮಾಡಿರುವಂತೆ

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖದನ್ವಯ ದಿನಾಂಕ 15-07-2012 ರಿಂದ 18-07-2012 ರವರೆಗೆ ನಡೆಯಲಿರುವ ಪ್ರೌಢ ಶಾಲಾ ಸಹ ಶಿಕ್ಷಕರ ನೇಮಕಾತಿಯ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ಮುಖ್ಯಅಧೀಕ್ಷಕರಾಗಿ ಕಾರ್ಯನಿರ್ವಹಿಸಲು ಉಲ್ಲೇಖದಂತೆ ತಮ್ಮನ್ನು (ಕೇಂದ್ರದ ಹೆಸರು) ........................................................................................................................................ ಕೇಂದ್ರದ ಮುಖ್ಯ ಅಧೀಕ್ಷಕರಾಗಿ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರು ನೇಮಿಸಿರುವರು. ಈ ಸಂಬಂಧ ಪೂರ್ಣ ವಿವರಗಳನ್ನೊಳಗೊಂಡಿರುವ ಮಾರ್ಗಸೂಚಿ ಹಾಗೂ ಮುಖ್ಯ ಅಧೀಕ್ಷಕರಾಗಿ ಕಾರ್ಯನಿರ್ವಹಿಸುವ ಬಗ್ಗೆ ಮುಖ್ಯ ಕಾರ್ಯಸೂಚಿಯನ್ನು ಈ ಪತ್ರದ ಜೊತೆ ಲಗತ್ತಿಸಿದೆ. ಕೂಲಂಕುಷವಾಗಿ ಅಭ್ಯಾಸ ಮಾಡಿ ಅಗತ್ಯ ಕ್ರಮ ವಹಿಸುವುದು. ಜಿಲ್ಲಾ ಉಪನಿರ್ದೇಶಕರು ಹಾಗೂ ನೋಡಲ್ ಅಧಿಕಾರಿಗಳು ನೇಮಿಸಿದ ಮಾರ್ಗಾಧಿಕಾರಿಗಳಿಂದ ಪರೀಕ್ಷೆಯ ಗೌಪ್ಯ ಸಾಮಗ್ರಿಗಳನ್ನು ಪಡೆದು ಪರೀಕ್ಷೆ ನಂತರ ಉತ್ತರಿಸಿದ ಓ.ಎಂ.ಆರ್. ಮತ್ತು ಇತರ ಗೌಪ್ಯ ಸಾಮಗ್ರಿಗಳನ್ನು **Insured Register Parcel** ಮೂಲಕ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿಗೆ ಕಳುಹಿಸಲು ಹಾಗೂ ಉಳಿದ ಪ್ರಶ್ನೆ ಪತ್ರಿಕೆಗಳ ಮತ್ತು ಇತರ ಗೌಪ್ಯ ಸಾಮಗ್ರಿಗಳನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ನೋಡಲ್ ಅಧಿಕಾರಿಗಳು ನೇಮಿಸಿದ ಮಾರ್ಗಾಧಿಕಾರಿಗಳಿಗೆ ಒಪ್ಪಿಸುವ ತನಕ ಇರುವ ಎಲ್ಲಾ ಪರೀಕ್ಷಾ ಕಾರ್ಯಗಳನ್ನು ಕೇಂದ್ರದ ವೀಕ್ಷಕರ ಜೊತೆ ಇದ್ದು ಪರೀಕ್ಷಾ ಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಂಡು ಯಾವುದೇ ಅಡೆತಡೆ ಇಲ್ಲದೆ ಯಶಸ್ವಿಯಾಗಿ ಪರೀಕ್ಷೆಯನ್ನು ನಡೆಸಲು ಕೋರಿದೆ. ಈ ಆದೇಶದ ಜೊತೆಗೆ ಅಭ್ಯರ್ಥಿಗಳ ನಾಮಿನಲ್ ರೋಲ್ ಹಾಗೂ ಸಾದಿಲ್ವಾರು ವೆಚ್ಚದ ಬ್ಯಾಂಕ್ ಹುಂಡಿಯನ್ನು ಕಳುಹಿಸಿಕೊಡಲಾಗಿದ್ದು, ಉಪನಿರ್ದೇಶಕರು /ನೋಡಲ್ ಅಧಿಕಾರಿಗಳಿಂದ ಪಡೆದುಕೊಳ್ಳುವುದು ಹಾಗೂ ನಿಯಮಾನುಸಾರ ಖರ್ಚು ಮಾಡಿ ಕೇಂದ್ರೀಕೃತ ದಾಖಲಾತಿ ಘಟಕ, ಬೆಂಗಳೂರು ಇಲ್ಲಿಗೆ ಉಪಯೋಗಿತ ಪ್ರಮಾಣ ಪತ್ರವನ್ನು(ಯು.ಸಿ) ಕಳುಹಿಸಿಕೊಡುವುದು. ಕೇಂದ್ರೀಕೃತ ದಾಖಲಾತಿ ಘಟಕದಿಂದ ಸಿ.ಜಿ. ಜೊತೆ ನೀಡಿರುವ ಸಂಭಾವನೆಯನ್ನು ಕೇಂದ್ರದ ವೀಕ್ಷಕರಿಗೆ ನೀಡಿ ಸ್ವೀಕೃತಿ ಪಡೆದುಕೊಳ್ಳಲು ತಿಳಿಸಿದೆ.

ಈಗ ಮಾಡಿರುವ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಮಾರ್ಪಡಿಸಲು / ರದ್ದುಪಡಿಸಲು ಅವಕಾಶವಿಲ್ಲ. ಆದರೆ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಗೆ ತಮ್ಮ ಮಗ/ಮಗಳು ನೋಂದಣಿಯಾಗಿದ್ದಲ್ಲಿ ಮುಖ್ಯ ಅಧೀಕ್ಷಕರಾಗಿ ಕಾರ್ಯ ನಿರ್ವಹಿಸಲು ತಾವು ಅನರ್ಹರಾಗುವಿರಿ. ತಾವು ಈ ಕಾರಣಕ್ಕಾಗಿ ಅನರ್ಹರಾದಲ್ಲಿ ತಕ್ಷಣ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಗೆ ತಿಳಿಸಲು ಕೋರಿದೆ.

ತಮ್ಮ ನಂಬುಗೆಯ

(ದಿವಾಕರ್) 19/6/12

ವಿಶೇಷಾಧಿಕಾರಿಗಳು

ಕೇಂದ್ರೀಕೃತ ದಾಖಲಾತಿ ಘಟಕ

ಬೆಂಗಳೂರು.